

## ಶಾಂಕರ ಭಾಷ್ಯಸಮೇತ

# ಈಶಾವಾಸ್ಯ ಉಪನಿಷತ್ತು



ಸ್ವಾಮಿ ವೀರೇಶಾನಂದ

(ಮೂಲ, ಪದಾರ್ಥ, ಅನುವಾದ, ಶಂಕರಭಾಷ್ಯದ ಮೂಲ, ಶಂಕರಭಾಷ್ಯದ ಅನುವಾದ ಹಾಗೂ ಟಿಪ್ಪಣಿಗಳು)

### ಭಾಗ ೨

**ಈಶಾವಾಸ್ಯಮಿದಂ ಸರ್ವಂ**
**ಯತ್‌ಕಿಂಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಂಜೀಥಾ**
**ಮಾ ಗೃಧಃ ಕಸ್ಯಸ್ವಿದ್ಧನಮ್ ॥೧॥**

**ಜಗತ್ಯಾಂ** = ಈ ಭೂಮಿಯಲ್ಲಿ **ಯತ್‌ಕಿಂಚ** = ಏನೇನು **ಜಗತ್** = ಚಲಿಸುವ ಗುಣವಿರುವುದು ಇದೆಯೋ **ಇದಂ ಸರ್ವಂ** = ಇವೆಲ್ಲವನ್ನೂ **ಈಶಾ** = ಎಲ್ಲರ ಆತ್ಮನಾಗಿರುವ ಪರಮೇಶ್ವರನಿಂದ **ವಾಸ್ಯಂ** = ಆವರಿಸಿಬಿಡಬೇಕು. **ತೇನ ತ್ಯಕ್ತೇನ** = ಈ ಬಗೆಯ ತ್ಯಾಗದಿಂದ **ಭುಂಜೀಥಾಃ** = ನಿನ್ನನ್ನು ನೀನು ಕಾಪಾಡಿಕೋ. **ಕಸ್ಯಸ್ವಿತ್ ಧನಂ** = ಯಾರ ಧನವನ್ನೂ **ಮಾ ಗೃಧಃ** = ಆಶಿಸಬೇಡ.

ಭಾಷ್ಯ : **ಈಶಾ ಈಷ್ಟೇ ಇತಿ ಈಟ್, ತೇನ ಈಶಾ । ಈಶಿತಾ ಪರಮೇಶ್ವರಃ ಪರಮಾತ್ಮಾ ಸರ್ವಸ್ಯ । ಸ ಹಿ ಸರ್ವಮೀಷ್ಟೇ ಸರ್ವಜಂತೂನಾಮ್ ಆತ್ಮಾ ಸನ್ ಪ್ರತ್ಯಗಾತ್ಮತಯಾ। ತೇನ ಸ್ವೇನ ರೂಪೇಣ ಆತ್ಮನಾ ಈಶಾ ವಾಸ್ಯಮ್ ಆಚ್ಛಾದನೀಯಮ್। ಕಿಮ್? ಇದಂ ಸರ್ವಂ ಯತ್ಕಿಂಚ ಯತ್ಕಿಂಚಿತ್ ಜಗತ್ಯಾಂ ಪೃಥಿವ್ಯಾಂ ಜಗತ್ ತತ್ಸರ್ವಮ್। ಸ್ವೇನ ಆತ್ಮನಾ ಈಶೇನ ಪ್ರತ್ಯಗಾತ್ಮತಯಾ 'ಅಹಮೇವ ಇದಂ ಸರ್ವಮ್' ಇತಿ ಪರಮಾರ್ಥಸತ್ಯರೂಪೇಣ ಅನೃತಮಿದಂ ಸರ್ವಂ ಚರಾಚರಮ್ ಆಚ್ಛಾದನೀಯಂ ಪರಮಾತ್ಮನಾ। ಯಥಾ ಚಂದನ-ಅಗರು ಆದೇಃ ಉದಕಾದಿಸಂಬಂಧಜ ಕ್ಲೇದಾದಿಜಮ್ ಔಪಾಧಿಕಂ ದೌರ್ಗಂಧ್ಯಂ ತತ್ ಸ್ವರೂಪನಿಘರ್ಷಣೇನ ಆಚ್ಛಾದ್ಯತೇ ಸ್ವೇನ ಪಾರಮಾರ್ಥಿಕೇನ ಗಂಧೇನ, ತದ್ವದೇವ ಹಿ ಸ್ವಾತ್ಮನಿ ಅಧ್ಯಸ್ತಂ ಸ್ವಾಭಾವಿಕಂ ಕರ್ತೃತ್ವ-ಭೋಕ್ತೃತ್ವಾದಿಲಕ್ಷಣಂ ಜಗತ್ ದ್ವೈತರೂಪಂ ಪೃಥಿವ್ಯಾಮ್, ಜಗತ್ಯಾಮ್ ಇತಿ ಉಪಲಕ್ಷಣಾರ್ಥತ್ವಾತ್ ಸರ್ವಮೇವ ನಾಮ-ರೂಪ-ಕರ್ಮಾಖ್ಯಂ ವಿಕಾರಜಾತಂ ಪರಮಾರ್ಥಸತ್ಯಾತ್ಮಭಾವನಯಾ ತ್ಯಕ್ತಂ ಸ್ಯಾತ್। ಏವಮ್ ಈಶ್ವರಾತ್ಮಭಾವನಯಾ ಯುಕ್ತಸ್ಯ ಪುತ್ರಾದಿ ಏಷಣಾತ್ರಯಸಂನ್ಯಾಸೇ ಏವ ಅಧಿಕಾರಃ, ನ ಕರ್ಮಸು ।**

ಯಾರು ಆಳುತ್ತಾನೆಯೋ ಅವನು ಈಟ್. **ಈಶಾ** ಎಂದರೆ ಅಂಥ ಆಳುವವನಿಂದ ಎಂದರ್ಥ. ಈ ಈಶನಿಂದ, ಪರಮೇಶ್ವರನಿಂದ, ಎಲ್ಲ ಜೀವಿಗಳ ಪರಮ ಆತ್ಮಸ್ವರೂಪನಿಂದ ಎಂದರ್ಥ. ಅವನು ಎಲ್ಲ ಜೀವಿಗಳ ಅಂತರಾಳದಲ್ಲಿ ಇರುವ ಚೈತನ್ಯ ಸ್ವರೂಪನು. ಹೀಗಾಗಿ ಎಲ್ಲರ ಆತ್ಮನು. ಅವನು ಎಲ್ಲರನ್ನೂ ಆಳುತ್ತಾನೆ ಎಂದರೆ ಅವನು ಎಲ್ಲರಲ್ಲಿಯೂ ಇದ್ದಾನೆ ಎಂದೇ ಅರ್ಥ. ನಮ್ಮ ಸ್ವರೂಪವೇ ಆಗಿರುವ ಈ ಈಶನಿಂದ **ವಾಸ್ಯಮ್** ಮುಚ್ಚಿಬಿಡಬೇಕು, ಆವರಿಸಿಬಿಡಬೇಕು. ಏನನ್ನು ತಾನೇ ಮುಚ್ಚಿಬಿಡಬೇಕು? **ಇದಂ ಸರ್ವಂ** ಇವೆಲ್ಲವನ್ನೂ, **ಯತ್ಕಿಂಚ ಜಗತ್ಯಾಂ** ಈ ಜಗತ್ತಿನಲ್ಲಿ ಅಂದರೆ ಭೂಮಿಯಲ್ಲಿ **ಜಗತ್** ಯಾವುದು ಚಲಿಸುವುದೋ ಅವೆಲ್ಲವನ್ನೂ ಮುಚ್ಚಿಬಿಡಬೇಕು. ಪ್ರತ್ಯಗಾತ್ಮರೂಪದಿಂದ (ದೇಹಾದಿಗಳ ಒಳಗೆ ಇರುವ ಚೈತನ್ಯ ರೂಪದಿಂದ) ನಮ್ಮ ಆತ್ಮವೇ ಆಗಿರುವ ಪರಮಾತ್ಮನಾದ ಈಶನಿಂದ, 'ನಾನೇ ಇದೆಲ್ಲವೂ ಆಗಿದ್ದೇನೆ' ಎಂಬ ಅನುಭವದಿಂದ ಉಂಟಾಗುವ ಪರಮಾರ್ಥಸತ್ಯ ಸಾಕ್ಷಾತ್ಕಾರದ ಮೂಲಕ, ಅಸತ್ಯವಾದ ಇವೆಲ್ಲ ಚರಾಚರ ವಸ್ತುಗಳನ್ನೂ ಮುಚ್ಚಿಬಿಡಬೇಕು.

ಚಂದನ ಅಗರು ಮುಂತಾದ ಸುಗಂಧ ಪದಾರ್ಥಗಳಿಗೆ ನೀರು ಮೊದಲಾದವುಗಳ ಸಂಪರ್ಕದಿಂದ ಕೆಟ್ಟ ವಾಸನೆ ಬರುತ್ತದೆ. ಅದಕ್ಕಾಗಿ ಚಂದನ ಅಗರುಗಳನ್ನು ಚೆನ್ನಾಗಿ ಉಜ್ಜಬೇಕು. ಆಗ ನೀರಿನ ಸಂಪರ್ಕದಿಂದ ಉಂಟಾದ ಕೆಟ್ಟ ವಾಸನೆಯು

ಮರೆಯಾಗುತ್ತದೆ. ನಿಜವಾದ ಸುಗಂಧವು ಆವರಿಸಿಕೊಳ್ಳುತ್ತದೆ. ಇದೇ ರೀತಿ, ನಮ್ಮ ನಿಜವಾದ ರೂಪವಾದ ಆತ್ಮನಲ್ಲಿ, ಅಜ್ಞಾನದ ಕಾರಣದಿಂದಾಗಿ, ಕರ್ತೃತ್ವ (ನಾನೇ ಮಾಡುವವನು), ಭೋಕ್ತೃತ್ವ (ನಾನೇ ಭೋಗಿಸುವವನು) ಮುಂತಾದ ಗುಣಗಳು ಆಧ್ಯಾಸ ಗೊಂಡಿವೆ, ಅಂದರೆ ತಪ್ಪಾಗಿ ಕಾಣಿಸಿಕೊಳ್ಳುತ್ತಿವೆ. ಇದರಿಂದಲೇ ದ್ವೈತರೂಪವಾದ ಈ ಜಗತ್ತು ಕಾಣಿಸಿಕೊಳ್ಳುತ್ತಿದೆ. **ಜಗತ್ಯಾಮ್** ಎಂದು ಹೇಳಿರುವುದು ಉಪಲಕ್ಷಣಕ್ಕಾಗಿ, ಅಂದರೆ ಗುರುತಿಗಾಗಿ. ಈ ಪದವು ಕೇವಲ ಚಲಿಸುವ ಜೀವಿಗಳನ್ನು ಮಾತ್ರ ಸೂಚಿಸು ವುದಿಲ್ಲ. ಎಲ್ಲವನ್ನೂ, ಅಂದರೆ, ನಾಮ-ರೂಪ-ಕರ್ಮಗಳೆಂಬ ಹೆಸರುಗಳನ್ನು ಪಡೆದಿರುವ, ಪರಿವರ್ತನೆಯಾಗುತ್ತಿರುವ ಎಲ್ಲ ವಸ್ತುಸಮೂಹವನ್ನೂ ಸೂಚಿಸುತ್ತದೆ. ಪರಮಾರ್ಥ ಸತ್ಯವಾದ ಆತ್ಮಭಾವನೆಯನ್ನು ಬೆಳೆಸಿಕೊಂಡರೆ, ಅಸತ್ಯವಾದ ಈ ಜಗತ್ತಿನ ಭಾವನೆಯನ್ನು ತ್ಯಾಗ ಮಾಡಿದಂತೆ ಆಗುತ್ತದೆ. ಯಾರು ಹೀಗೆ ಎಲ್ಲರ ಆತ್ಮಸ್ವರೂಪನಾದ ಪರಮೇಶ್ವರನೇ ನಾನು ಎಂಬ ಭಾವನೆ ಯನ್ನು ಪಡೆದುಕೊಳ್ಳುವರೋ, ಅವರಿಗೆ ಕರ್ಮಗಳಲ್ಲಿ ಅರ್ಹತೆ ಬರುವುದಿಲ್ಲ. ಅಂಥವರಿಗೆ ಪುತ್ರ, ಧನ ಮತ್ತು ಲೋಕಗಳಲ್ಲಿನ ಮೂರು ಬಗೆಯ ಆಸೆಗಳನ್ನು ತ್ಯಜಿಸುವ ಸ್ಥಿತಿಯಾದ ಸಂನ್ಯಾಸದಲ್ಲಿ ಮಾತ್ರವೇ ಅರ್ಹತೆಯಿರುತ್ತದೆ.

**ಟಿಪ್ಪಣಿಗಳು:**

೧. ಈಟ್ (ಆಳುವವನು) ಎಂಬ ಶಬ್ದವು ಬಂದಿರುವುದು ಈಶ್ ಎಂಬ ಧಾತುವಿನಿಂದ. ಇದರ ಅರ್ಥ, ಆಳುವುದು, ಅಧಿಕಾರವನ್ನು ಹೊಂದಿರುವುದು ಎಂದು. ಈಟ್ ಪದದ ತೃತೀಯಾ ವಿಭಕ್ತಿ ಏಕವಚನ ಈಶಾ ಎಂದಾಗುತ್ತದೆ. ಇದರ ಅರ್ಥ ಜಗತ್ತಿನಲ್ಲಿ ಇರುವ ಎಲ್ಲವನ್ನೂ ಆಳುವವನಾದ ಪರಮಾತ್ಮನಿಂದ ಎಂದು.

೨. ಪ್ರತ್ಯಗಾತ್ಮ - ಪ್ರತ್ಯಕ್ ಎಂದರೆ ದೇಹಮನಸ್ಸುಗಳ ಸಂಘಾತದ ಒಳಗಿರುವ ಎಂದರ್ಥ. ಆತ್ಮ ಎಂದರೆ ಜಡವಾದ ದೇಹ ಮನಸ್ಸು ಗಳಿಗಿಂತ ಭಿನ್ನವಾದ ಚೈತನ್ಯವಸ್ತು. ಇದೇ ಒಬ್ಬ ವ್ಯಕ್ತಿಯ ನಿಜವಾದ ಸ್ವರೂಪ. ಹೀಗಾಗಿ ಇದನ್ನು ಪ್ರತ್ಯಗಾತ್ಮ ಎನ್ನುತ್ತಾರೆ.

೩. ಅಧ್ಯಾಸವೆಂದರೆ ಒಂದು ಇನ್ನೊಂದಾಗಿ ಅನುಭವಕ್ಕೆ ಬರುವುದು. ಉದಾಹರಣೆಗೆ, ಹಗ್ಗವು ನಸುಗತ್ತಲೆಯಲ್ಲಿ ಹಾವು ಎಂಬಂತೆ ಅನುಭವಕ್ಕೆ ಬರುತ್ತದೆ. ಅಂದರೆ, ಹಗ್ಗವೇ ಹಾವಾಗಿ ಕಾಣುತ್ತದೆ, ಅಷ್ಟೇ. ಆದರೆ ನಿಜವಾಗಿ ಅಲ್ಲಿ ಇರುವುದು ಹಗ್ಗ ಮಾತ್ರ. ಹೀಗೆಯೇ ಚೈತನ್ಯವಸ್ತುವಾದ ಆತ್ಮವು ಮಾತ್ರವೇ ನಿಜವಾಗಿ ನಾನು ಎಂಬ ಜ್ಞಾನಕ್ಕೆ ವಿಷಯವಾಗಿರುತ್ತದೆ. ಆದರೆ ಅಧ್ಯಾಸದ ಪ್ರಭಾವದಿಂದಾಗಿ, ದೇಹ, ಮನಸ್ಸು ಮುಂತಾದವುಗಳಲ್ಲಿ ನಾನು ಎಂಬ ಅನುಭವವನ್ನು ಜನರು ಸಾಧಾರಣವಾಗಿ ಪಡೆದುಕೊಳ್ಳುತ್ತಾರೆ. ಇದೇ ರೀತಿ ದೇಹ ಮತ್ತು ಮನಸ್ಸುಗಳ ಗುಣಗಳಾದ ಕರ್ತೃತ್ವ, ಭೋಕ್ತೃತ್ವ ಮುಂತಾದವುಗಳನ್ನು ಇಂಥ ಯಾವುದೇ ಗುಣಗಳು ಇಲ್ಲದ, ಕೇವಲ ಚೈತನ್ಯಸ್ವರೂಪವಾದ ಆತ್ಮನಲ್ಲಿ ಆರೋಪಿಸುತ್ತಾರೆ. ಇದನ್ನೇ ಅಧ್ಯಾಸ ಎನ್ನುವುದು.

೪. ಜಗತ್ಯಾಂ ಎನ್ನುವ ಪದವು ಮೇಲುನೋಟಕ್ಕೆ ಕೇವಲ ಚಲಿಸುವ ಪ್ರಾಣಿಗಳನ್ನು ಮಾತ್ರ ಸೂಚಿಸುತ್ತದೆ. ಆದರೆ ಭಾಷ್ಯಕಾರರಾದ ಶ್ರೀಶಂಕರಾಚಾರ್ಯರು, ಈ ಪದವು ಈ ಜಗತ್ತಿನಲ್ಲಿರುವ, ಚರ-ಅಚರ, ಎರಡೂ ರೀತಿಯ ವಸ್ತುಗಳನ್ನು ಸೂಚಿಸುತ್ತದೆ ಎಂದು ಹೇಳು ತ್ತಾರೆ. ಹೀಗಾಗಿ ಜಗತ್ಯಾಂ ಎನ್ನುವುದು ಒಂದು ಉಪಲಕ್ಷಣ, ಅಂದರೆ, ಗುರುತು ಮಾಡಿ ತೋರಿಸುವ ಪದ. ಅದು ತನ್ನ ಪ್ರಾಥಮಿಕ ಅರ್ಥ ದಲ್ಲಿ, ಚಲಿಸುವ ಪ್ರಾಣಿಗಳನ್ನು ಮಾತ್ರ ಹೇಳಿದರೂ, ಸೂಚ್ಯಾರ್ಥದಲ್ಲಿ ಜಗತ್ತಿನಲ್ಲಿರುವ ಎಲ್ಲ ವಸ್ತುಗಳನ್ನೂ ಲಕ್ಷಿಸುತ್ತದೆ. ಆಗ ಮಾತ್ರ **ಈಶಾ ವಾಸ್ಯಂ ಇದಂ ಸರ್ವಂ** : ಈ ಜಗತ್ತಿನಲ್ಲಿ ಇರುವುದೆಲ್ಲವನ್ನೂ ಪರಮಾತ್ಮನಿಂದ ಮುಚ್ಚಿಬಿಡಬೇಕು ಎನ್ನುವ ಉಪನಿಷತ್ತಿನ ವಾಕ್ಯವು ಅರ್ಥ ಪೂರ್ಣವಾಗುತ್ತದೆ.

**ಭಾಷ್ಯ : ತೇನ ತ್ಯಕ್ತೇನ ತ್ಯಾಗೇನ ಇತ್ಯರ್ಥಃ । ನ ಹಿ ತ್ಯಕ್ತಃ ಮೃತಃ ಪುತ್ರಃ ಭೃತ್ಯೋ ವಾ ಆತ್ಮಸಂಬಂಧಿತಾಯಾ ಅಭಾವಾತ್ ಆತ್ಮಾನಂ ಪಾಲಯತಿ । ಅತಃ ತ್ಯಾಗೇನ ಇತಿ ಅಯಮೇವ ಅರ್ಥಃ । ಭುಂಜೀಥಾಃ ಪಾಲಯೇಥಾಃ । ಏವಂ ತ್ಯಕ್ತ ಏಷಣಃ ತ್ವಂ ಮಾ ಗೃಧಃ ಗೃಧಿಮ್ ಆಕಾಂಕ್ಷಾಂ ಮಾ ಕಾರ್ಷೀಃ ಧನವಿಷಯಾಮ್। ಕಸ್ಯಸ್ವಿತ್ ಕಸ್ಯಚಿತ್ ಪರಸ್ಯ ಸ್ವಸ್ಯ ವಾ ಧನಂ ಮಾ ಕಾಂಕ್ಷೀಃ ಇತ್ಯರ್ಥಃ। ಸ್ವಿತ್ ಇತಿ ಅನರ್ಥಕಃ ನಿಪಾತಃ । ಅಥವಾ, ಮಾ ಗೃಧಃ । ಕಸ್ಮಾತ್ ? ಕಸ್ಯ ಸ್ವಿತ್ ಧನಮ್ ಇತಿ ಆಕ್ಷೇಪಾರ್ಥಃ । ನ ಕಸ್ಯಚಿತ್ ಧನಮಸ್ತಿ, ಯತ್ ಗೃಧ್ಯೇತ । ಆತ್ಮೈವೇದಂ ಸರ್ವಮ್ (ಛಾಂದೋಗ್ಯ, ೭-೨೫-೧) ಇತಿ ಈಶ್ವರಭಾವನಯಾ ಸರ್ವಂ ತ್ಯಕ್ತಮ್। ಅತಃ ಆತ್ಮನಃ ಏವ ಇದಂ ಸರ್ವಮ್, ಆತ್ಮೈವ ಚ ಸರ್ವಮ್। ಅತಃ ಮಿಥ್ಯಾವಿಷಯಾಂ ಗೃಧಿಂ ಮಾ ಕಾರ್ಷೀಃ ಇತ್ಯರ್ಥಃ ।**

**ತೇನ ತ್ಯಕ್ತೇನ** ಎಂದರೆ ಈ ರೀತಿಯ ವೈರಾಗ್ಯದಿಂದ ಎಂದರ್ಥ (ಕೇವಲ ಬಿಟ್ಟುಬಿಡುವುದು ಎಂಬ ಅರ್ಥವಲ್ಲ). ಮಗ ಅಥವಾ ಸೇವಕನನ್ನು ಬಿಟ್ಟುಬಿಟ್ಟರೆ ಅಥವಾ ಅವರು ಸತ್ತು ಹೋದರೆ, ಅದರಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ನಮ್ಮ ಆತ್ಮನಿಗೂ ಮಗ ಅಥವಾ ಸೇವಕನಿಗೂ ಯಾವ ಸಂಬಂಧವೂ ಇರುವುದಿಲ್ಲ. ಹೀಗಾಗಿ, ಉಪನಿಷತ್ತಿನಲ್ಲಿ ತ್ಯಾಗ ದಿಂದ ಕಾಪಾಡಿಕೋ ಎಂದು ಹೇಳಿರುವುದರಿಂದ **ತ್ಯಕ್ತೇನ** ಎಂಬ ಪದಕ್ಕೆ ವೈರಾಗ್ಯದಿಂದ ಉಂಟಾದ ತ್ಯಾಗದಿಂದ ಎನ್ನುವುದೇ

ಸರಿಯಾದ ಅರ್ಥವಾಗುತ್ತದೆ. ಇಂಥ ತ್ಯಾಗದ ಮೂಲಕ **ಭುಂಜೀಥಾಃ** ನಿನ್ನನ್ನು ನೀನು ರಕ್ಷಿಸಿಕೋ. ಈ ರೀತಿ ಆಸೆಗಳ ತ್ಯಾಗವನ್ನು ಮಾಡಿರುವ ನೀನು **ಮಾ ಗೃಧಿಃ** ದುರಾಶೆಯನ್ನು, ಆಕಾಂಕ್ಷೆಯನ್ನು ಹಣದ ವಿಷಯದಲ್ಲಿ ಮಾಡಬೇಡ ಎಂದರ್ಥ. ಏಕೆಂದರೆ, **ಕಸ್ಯಸ್ವಿತ್ ಧನಂ** ಯಾರ ಧನವನ್ನು ಕೂಡ – ನಿನ್ನ ಧನವಾಗಲಿ – ಅಥವಾ ಇತರರ ಧನವಾಗಲಿ ಅವುಗಳ ಮೇಲೆ ದುರಾಶೆ ಅಥವಾ ಆಕಾಂಕ್ಷೆಯನ್ನು ಬೆಳೆಸಿಕೊಳ್ಳಬೇಡ. **ಕಸ್ಯಸ್ವಿತ್** ಎಂಬಲ್ಲಿ **ಸ್ವಿತ್** ಎನ್ನುವ ಪದವು ಯಾವುದೇ ನಿರ್ದಿಷ್ಟ ಅರ್ಥ ಇಲ್ಲದಿರುವ ನಿಪಾತ. ಇನ್ನೊಂದು ರೀತಿಯಲ್ಲಿಯೂ ಇದನ್ನು ವಿವರಿಸಬಹುದು. **ಮಾ ಗೃಧಃ** ದುರಾಶೆಯನ್ನು ಮಾಡಬೇಡ. ಏಕೆ? 'ಇದು ಯಾರ ಹಣ?' ಎಂಬ ಆಕ್ಷೇಪದ ಅರ್ಥವನ್ನೂ **ಕಸ್ಯಸ್ವಿತ್ ಧನಂ** ಎನ್ನುವುದಕ್ಕೆ ನೀಡಬಹುದು. ದುರಾಶೆಯನ್ನು ಪಡುವುದಕ್ಕೆ ಯಾರದೋ ಒಬ್ಬರದು ಎಂದು ಹೇಳುವ ಧನವೇ ಇಲ್ಲ. ಏಕೆಂದರೆ, **ಆತ್ಮೈವ ಇದಂ ಸರ್ವಂ** (ಛಾಂದೋಗ್ಯ, ೭-೨೫-೧) ಎಂಬ ಜ್ಞಾನದ ಮೂಲಕ ಈಗಾಗಲೇ ಎಲ್ಲವನ್ನೂ ತ್ಯಾಗಮಾಡಲಾಗಿದೆ. ಆದ್ದರಿಂದ, ಜಗತ್ತಿನ ರೂಪದಲ್ಲಿ ಕಂಡುಬರುವ ಇವೆಲ್ಲವೂ ಆತ್ಮನದೇ ಆಗಿದೆ. ಅಂದರೆ, ಇವೆಲ್ಲವೂ ಆತ್ಮವೇ ಆಗಿದೆ. (ಹೀಗಾಗಿ ಯಾರದೋ ಸ್ವತ್ತೆಂದು ಹೇಳುವ ಧನಕ್ಕೆ ಸ್ವಂತ ಅಸ್ತಿತ್ವವೇ ಇಲ್ಲ.). ಆದ್ದರಿಂದ, ಇಲ್ಲದೇ ಇರುವ, ಅಸತ್ಯವಾದ ವಿಷಯದಲ್ಲಿ ದುರಾಶೆಯನ್ನು ಮಾಡದಿರು ಎಂದರ್ಥ.

**ಟಿಪ್ಪಣಿಗಳು:**

೧. **ತ್ಯಕ್ತೇನ** ಎಂದರೆ ತ್ಯಜಿಸುವುದು, ಬಿಟ್ಟುಬಿಡುವುದು ಎಂದು ಅರ್ಥವಾಗುತ್ತದೆ. ಇದನ್ನು ವೈರಾಗ್ಯದಿಂದ ಉಂಟಾಗುವ ತ್ಯಾಗ ಎಂದು ಇಲ್ಲಿ ಅರ್ಥಮಾಡಿಕೊಳ್ಳಬೇಕು. ಏಕೆಂದರೆ ತ್ಯಾಗದಿಂದ ನಿನ್ನನ್ನು ನೀನು ಕಾಪಾಡಿಕೋ ಎಂದು ಉಪನಿಷತ್ತು ಹೇಳುತ್ತದೆ. ಅದು ಸಾಧ್ಯವಾಗುವುದು **ತ್ಯಕ್ತೇನ** ಎಂಬ ಪದವನ್ನು ವೈರಾಗ್ಯದಿಂದ ಹುಟ್ಟಿದ ತ್ಯಾಗ ಎಂದು ಅರ್ಥಮಾಡಿಕೊಂಡಾಗ ಮಾತ್ರ. ಇದನ್ನು ವಿವರಿಸುವುದಕ್ಕಾಗಿ ಭಾಷ್ಯಕಾರರಾದ ಶ್ರೀಶಂಕರಾಚಾರ್ಯರು ಒಂದು ಉದಾಹರಣೆಯನ್ನು ನೀಡುತ್ತಾರೆ: ಆತ್ಮಕ್ಕೆ ಸಂಬಂಧಿಸಿರದ ಮಗನೋ ಇಲ್ಲವೇ ಸೇವಕನೋ ಬಿಟ್ಟುಹೋದರೆ ಅಥವಾ ಸತ್ತುಹೋದರೆ, ಅದನ್ನೂ ತ್ಯಜಿಸುವುದು ಎಂದು ಅರ್ಥ ಮಾಡಿಕೊಳ್ಳಬಹುದು. ಆದರೆ ಈ ಸಂದರ್ಭದಲ್ಲಿ ಒಬ್ಬನು ತನ್ನನ್ನು ತಾನು ಕಾಪಾಡಿಕೊಂಡ ಹಾಗೆ ಆಗುವುದಿಲ್ಲ. ಅನಾತ್ಮವಸ್ತುಗಳ ಸಮೂಹವಾದ ಈ ಜಗತ್ತನ್ನು ಈಶ್ವರಭಾವನೆಯಿಂದ ನೋಡುವ ದೃಷ್ಟಿಯನ್ನು ಬೆಳೆಸಿಕೊಂಡಾಗ ಮಾತ್ರವೇ ಅಂಥ ಸಾಧಕನು ಜನನ-ಮರಣ ಚಕ್ರವಾದ ಸಂಸಾರದಿಂದ ತನ್ನನ್ನು ತಾನು ಕಾಪಾಡಿಕೊಳ್ಳಲು ಸಮರ್ಥನಾಗುತ್ತಾನೆ. ಇದು ವೈರಾಗ್ಯದಿಂದ ಕೂಡಿದ ತ್ಯಾಗದಿಂದ ಮಾತ್ರವೇ ಸಾಧ್ಯ.

೨. ಈ ಜಗತ್ತಿನಲ್ಲಿ ಧನಭೋಗಗಳಿಗಾಗಿ ಜನರು ಆಶೆಪಡುತ್ತಾರೆ. ಉಪನಿಷತ್ತು ಬೋಧಿಸುವ ವೈರಾಗ್ಯದಿಂದ ಉಂಟಾಗುವ ತ್ಯಾಗವು ಇದಕ್ಕೆ ವಿರುದ್ಧವಾದುದು. ಹೀಗಾಗಿ, ಯಾವ ಧನವನ್ನೂ – ತನ್ನದೇ ಆಗಿರಲಿ, ಇತರರದ್ದೇ ಆಗಿರಲಿ ಆಶಿಸಬಾರದು ಎಂದು ಉಪನಿಷತ್ತು ಆದೇಶಿಸುತ್ತದೆ. ತ್ಯಾಗ, ವೈರಾಗ್ಯಗಳು ಮಾತ್ರವೇ ಉಪನಿಷತ್ತು ಬೋಧಿಸುವ ಅದ್ವೈತಾನುಭೂತಿಗೆ ರಾಜಮಾರ್ಗಗಳು. ಇನ್ನೊಂದು ಅರ್ಥವನ್ನೂ ಭಾಷ್ಯಕಾರರು ನೀಡುತ್ತಾರೆ. ಜಗತ್ತಿನಲ್ಲಿ ಕಂಡುಬರುವ ಧನಸಂಪತ್ತುಗಳು ಯಾರಿಗೂ ಸೇರಿದ್ದಲ್ಲ. ಏಕೆಂದರೆ ಪಾರಮಾರ್ಥಿಕವಾಗಿ ಆತ್ಮವಸ್ತು ಬಿಟ್ಟರೆ ಇನ್ನೇನೂ ಇಲ್ಲ. ಆತ್ಮವೇ ಎಲ್ಲವೂ ಆಗಿದೆ; ಆದ್ದರಿಂದ ಧನಸಂಪತ್ತುಗಳೆಲ್ಲವೂ ಮಿಥ್ಯೆ ಮಾತ್ರ. ಹೀಗಾಗಿ ಅವುಗಳಿಗಾಗಿ ದುರಾಶೆ ಪಡುವುದರಲ್ಲಿ ಅರ್ಥವಿಲ್ಲ.

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



* ಭಗವಂತನನ್ನು ಪ್ರಾರ್ಥಿಸಲಿ, ಬಿಡಲಿ; ಯಾರು ಮದುವೆ ಮಾಡಿಕೊಂಡಿಲ್ಲವೋ ಅವರು ಆಗಲೇ ಅರ್ಧ ಮುಕ್ತರು. ಯಾವಾಗ ಅವರ ಮನಸ್ಸು ಭಗವಂತನ ಕಡೆಗೆ ಹೋಗುವುದೋ, ಆಗ ಅವರು ವೇಗವಾಗಿ ಮುಂದುವರಿಯುತ್ತಾರೆ. ಯಾರು ಮಹಾಪಾಪಗಳನ್ನು ಮಾಡಿದ್ದಾರೋ ಅವರು ಮದುವೆ ಮಾಡಿಕೊಂಡು ಸಂಸಾರ ಮಾಡುತ್ತಾರೆ. ಅವರ ಮನಸ್ಸು ಭಗವಂತನ ಕಡೆಗೆ ಹೋದರೂ, ಅವರಿಗೆ ಏನು ಮಾಡಿದರೂ ಅದರಿಂದ ಬಿಡಿಸಿಕೊಳ್ಳಲಾಗದು. ಅವರ ಕೈಕಾಲು ಎಲ್ಲ ಕಟ್ಟಿದಂತಾಗುತ್ತದೆ.

* ಸಂನ್ಯಾಸಿ ಎಂದರೆ ಅವನು ತ್ಯಾಗದ ಆದರ್ಶ. ದಾರಿಯಲ್ಲಿ ಮರದ ಸ್ತ್ರೀಮೂರ್ತಿ ಮುಖ ಕೆಳಗಾಗಿ ಬಿದ್ದಿದ್ದರೆ, ಅದನ್ನು ಸಾಧು ಕಾಲಿನಿಂದಲೂ ಕೂಡ ತಿರುಗಿಸಿ ನೋಡಬಾರದು. ಅಲ್ಲದೆ ಸಂನ್ಯಾಸಿಯಾದವನು ತನ್ನ ಬಳಿ ಹಣವನ್ನು ಇಟ್ಟುಕೊಳ್ಳುವುದು ಅತ್ಯಂತ ಕೆಟ್ಟದ್ದು. ಹಣ ಇಂಥ ಕೆಲಸ ಮಾಡಲಾರದು ಅಂತ ಹೇಳಲು ಸಾಧ್ಯವಿಲ್ಲ – ಅದು ಪ್ರಾಣಕ್ಕೇ ಅಪಾಯವನ್ನು ತರಬಹುದು. ಪುರಿಯ ಸಮುದ್ರದ ತೀರದಲ್ಲಿ ಒಬ್ಬ ಸಾಧು ವಾಸವಾಗಿದ್ದ. ಅವನ ಬಳಿ ಸ್ವಲ್ಪ ಹಣವಿತ್ತು. ಅದರ ಸುಳಿವು ಸಿಕ್ಕ ಶಿಷ್ಯಂದಿರಿಬ್ಬರು ತಮ್ಮ ಆಸೆಯನ್ನು ಹತ್ತಿಕ್ಕಲಾರದೆ ಅವನ ಕೊಲೆ ಮಾಡಿ ಹಣವನ್ನು ಹೊತ್ತೊಯ್ದರು.

*('ಶ್ರೀಶಾರದಾದೇವಿ ವಚನವೇದ', ಪು. ೫೫೫-೫೭)*